SRI. K. H. RANGANATH.—The Hon. Minister is casting reflections on me.

MR. SPEAKER.—I have called the next question.

ಶ್ರೀ ಕೆ. ಎಚ್. ರಂಗನಾಥ್.—ಅವರು ಆಗ ಯಾವ ಪಾರ್ಟಿಯಲ್ಲಿ ಇದ್ದರು ? ಯಾವುದಕ್ಕೂ ಆಗಿನ ಮಂತ್ರಿಗಳು ಮಾಡಿದರು ಎಂದು ಹೇಳಿದರೆ ಹೇಗೆ ?

ಅಧ್ಯಕ್ಷರು.—ನಾನು ಈ ಬಗ್ಗೆ ಮುಂದೆ ಚರ್ಚೆಗೆ ಅವಕಾಶ ಕೊಡಲಾರೆ.

ಶ್ರೀ ಎಂ. ಎಸ್. ಕೃಷ್ಣನ್.—ಪ್ರತಿಯೊಂದಕ್ಕೂ ಅವರನ್ನು ಕೋಟ್ ಮಾಡಿದರೆ ಏನು ಸ್ವಾಮಿ ?

ಶ್ರೀ ಬಿ. ರಾಚಯ್ಯ.—ಹಂಗಾಮಿ ಕೆಲಸ ಮಾಡುವವರೆಲ್ಲಾ ಹಂಗಾಮಿಯೇ.

MR. SPEAKER.—I am requesting the Hon. Member, ವಿದ್ಯಾ ಇಲಾಖೆ ಬೇಡಿಕೆ ವಿಷಯ ಸದನದಲ್ಲಿ ಚರ್ಚೆಗೆ ಬರುತ್ತದೆ. ಆಗ ಅವರು ಸವಿವರವಾದ ಚರ್ಚೆ ಮಾಡುಪುದು. ಈಗ ಮುಂದಿನ ಪ್ರಶ್ನೆಗೆ ಹೋಗೋಣ.

ವಿಷಯ : ಕೊಳವೆ ಬಾವಿಗಳನ್ನು ತೋಡುವುದು.

ಪ್ರ. 211 (56) ಶ್ರೀ ಎಂ. ವೀರಪ್ಪ ಮೊಯ್ಲಿ (ಕಾರ್ಕಳ).—ಮಾನ್ಯ ಗ್ರಾಮೀಣ ಅಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ :—

(ಅ) ಕನಕಪುರ ಕ್ಷೇತ್ರದಲ್ಲಿ 1-3-1983 ರಿಂದ 15-5-1983 ರವರೆಗೆ ತೋಡಿರುವ ಕೊಳವೆ ಬಾವಿಗಳ ಸಂಖ್ಯೆ ;

(ಆ) ಪಕ್ಕದ ಕ್ಷೇತ್ರಗಳಾದ ಅಂದರೆ—ಸಾತನೂರು, ಆನೇಕಲ್, ರಾಮನಗರ, ಉತ್ತರಪಳ್ಳಿಗಳಲ್ಲಿ ಮೇಲ್ಕಂಡ ಅವಧಿಯಲ್ಲಿ ತೋಡಿಸಲಾದ ಕೊಳವೆ ಬಾವಿಗಳ ಸಂಖ್ಯೆ ?

ಶ್ರೀ ಅಬ್ದುಲ್ ನಜೀರ್‌ಸಾಬ್ (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು).—

(ಅ) 150 ಕೊಳವೆ ಬಾವಿಗಳು.

(ಆ) ಸಾತನೂರು	58	ಕೊಳವೆ ಬಾವಿಗಳು
ಆನೇಕಲ್	39	,,
ರಾಮನಗರ	61	,,
ಉತ್ತರಪಳ್ಳಿ	53	,,

ಶ್ರೀ ಎಂ. ವೀರಪ್ಪ ಮೊಯ್ಲಿ.—ಮಾನ್ಯ ಅಧ್ಯಕ್ಷರೇ, ಪಿ.ಹೆಚ್.ಇ.ರಿಗ್ ಮೂವ್‌ಮೆಂಟ್ ಪ್ರಕಾರ ಕೊರೆ ಬಾವಿಗಳನ್ನು ಕನಕಪುರದಲ್ಲಿ ಎಷ್ಟು ತೋಡಿಸಲಾಗಿದೆ ? ಸಾತನೂರು, ಆನೇಕಲ್ ಹಾಗೂ ರಾಮನಗರ ಕ್ಷೇತ್ರಗಳಲ್ಲಿ ಎಷ್ಟು ತೋಡಿಸಲಾಗಿದೆ ? ಡಿವೀಯೇಷನ್ ಮಾಡುವಂಥ ಅಧಿಕಾರವನ್ನು ಜಿಲ್ಲಾಧಿಕಾರಿಯವರಿಗೆ ಯಾವಾಗ ಕೊಟ್ಟಿರಿ ? ಕನಕಪುರ ವಿಚಾರದಲ್ಲಿ ಯಾವಾಗ ಸರ್ಕಾರಕ್ಕೆ ಶಿಫಾರಸ್ಸು ಬಂತು ?

ಶ್ರೀ ಅಬ್ದುಲ್ ನಜೀರ್‌ಸಾಬ್.—ರಿಗ್ ಮೂವ್‌ಮೆಂಟನ್ನು ಇಡೀ ರಾಜ್ಯಕ್ಕೆ ಮಾಡಿದ್ದೇವೆ ಎನ್ನುವುದನ್ನು ಮಾನ್ಯ ವಿರೋಧಪಕ್ಷದ ನಾಯಕರಿಗೆ ಹೇಳಬಯಸುತ್ತೇನೆ. ಇದು ಸರ್ಕಾರ ಮಂಜೂರು ಮಾಡಿದ್ದಲ್ಲ. ಅಧಿಕಾರವನ್ನು ವಿಕೇಂದ್ರೀಕರಣಗೊಳಿಸಿ ಶಾಸಕರನ್ನೊಳಗೊಂಡ ತಾಲ್ಲೂಕುಮಟ್ಟದಲ್ಲಿರತಕ್ಕ ಅಭಾವ ಪರಿಶೀಲನಾ ಸಮಿತಿಯವರು ಒಂದು ಪಟ್ಟಿಯನ್ನು ತಯಾರು ಮಾಡಿ ಜಿಲ್ಲಾಧಿಕಾರಿಗಳಿಗೆ ಕಳುಹಿಸುತ್ತಾರೆ. ಅಲ್ಲಿಂದ ನನ್ನ ಇಲಾಖೆಗೆ ಬರುತ್ತದೆ ; ಅದನ್ನು ಮಂಜೂರು ಮಾಡಿ ಕಳುಹಿಸಿದ ಮೇಲೆ ಅವರ ಪ್ರಕಾರ ಕೆಲಸ ಪ್ರಾರಂಭ ಮಾಡುತ್ತಾರೆ. 1-2-3-4 ನೇ ಹಂತದ ಪಟ್ಟಿಯಂತೆ ಮಾಡಿದ್ದೇವೆ ; ಈಗ 5 ನೇ ಹಂತದ ಪಟ್ಟಿ ಕೂಡ ಬರುತ್ತಿದೆ.

ಶ್ರೀ ಎಂ. ವೀರಪ್ಪ ಮೊಯ್ಲಿ :—ತಾಲ್ಲೂಕು ಸಮಿತಿಯವರು ಹಾಗೂ ಡಿ.ಡಿ.ಸಿ.ಯವರು ಎಷ್ಟು ಪಾಯಿಂಟ್ ಗುರುತಿಸಿ ರೆಕಮೆಂಡೇಷನ್ ಮಾಡಿದ್ದಾರೆ ? ಡೀವಿಯೇಟ್ ಮಾಡಲಿಕ್ಕೆ 19-4-1983 ರಲ್ಲಿ ಸರ್ಕಾರ ಆಜ್ಞೆ ಹೊರಡಿಸಿದ್ದೀರಿ. ಇದರ ಆಧಾರದ ಮೇಲೆ ಕನಕಪುರದಲ್ಲಿ ಎಷ್ಟು ಪಾಯಿಂಟ್ ಸರ್ಕಾರ ನಿಷ್ಕರ್ಷೆ ಮಾಡಿತ್ತು ?

It is stated in the order that "it could be deviated wherever necessary". In the reply it is stated that "accordingly, the borewells

have been got drilled in the jurisdiction of this Divisiion with available rigs as directed by the Dy. Commissioner."

ಈಗ ಕೊಟ್ಟಿಂತ ಉತ್ತರದಿಂದ ಅಗತ್ಯಬಿದ್ದರೆ ಡೀವಿಯೇಟ್ ಮಾಡಬಹುದು. ಜಿಲ್ಲಾಧಿಕಾರಿಯವರು ಎಲ್ಲಾ ಕಡೆ ಮಾಡಬಹುದೆಂಬ ಹುಕುಂ ಎಲ್ಲೂ ಇಲ್ಲ. ತಾವು ಕೊಟ್ಟಿರತಕ್ಕ ಉತ್ತರ ಗೊಂದಲಮಯವಾಗಿದೆ. ವೈಪರೀತ್ಯದಿಂದ ಕೂಡಿದೆ.

ಶ್ರೀ ಅಬ್ದುಲ್ ನಜೀರ್‌ಸಾಬ್.—ಸ್ವಾಮಿ, 1-3-1983 ರಿಂದ 15-5-1983 ರವರೆಗೆ ಸುಮಾರು 150 ಕೊಳವೆ ಬಾವಿಗಳನ್ನು ತೋಡಲಾಗಿದೆ. ಪಕ್ಕದ ಕ್ಷೇತ್ರವಾದ ಸಾತನೂರಿನಲ್ಲಿ 58, ಆನೇಕಲ್‌ನಲ್ಲಿ 39, ರಾಮನಗರದಲ್ಲಿ 61 ಹಾಗೂ ಉತ್ತರಹಳ್ಳಿಯಲ್ಲಿ 53 ನ್ನು ತೋಡಿಸಲಾಗಿದೆ. ಇದರಲ್ಲಿ ಯಾವ ವೈಪರೀತ್ಯವೂ ಕಾಣುವುದಿಲ್ಲ.

SRI, M. VEERAPPA MOILY.—There is a difference between reply and the direction given by the Government. I can pass over both. According to the reply absolute discretion is given to the Dy. Commissioner but according to the Government order only deviation is permitted if necessary. There is a clear contradiction between reply given on the floor of the House and the Government directions. The Hon'ble Minister can go through it. Therefore, please don't mislead the House.

ಶ್ರೀ ಅಬ್ದುಲ್ ನಜೀರ್‌ಸಾಬ್.—ಸ್ವಾಮಿ, ಅವರು ಏನು ಕೇಳಿದ್ದಾರೆ, ಅದಕ್ಕೆ ಉತ್ತರ ಕೊಟ್ಟಿದ್ದೇನೆ. I am not misleading the House. I have now understood what he is saying.

ನಗರಪ್ರದೇಶಗಳಲ್ಲೂ ಕೂಡ ನೀರಿಗೆ ಹಾಹಾಕಾರ ಇತ್ತು. ಅದನ್ನು ಪೂರೈಸಲಿಕ್ಕೆ ಪ್ರಯತ್ನ ಮಾಡಿದ್ದೇವೆ ಯಾವ ರೀತಿಯ ಮಂಜೂರಾತಿಯನ್ನೂ ಸರ್ಕಾರ ಕೊಳವೆ ಬಾವಿಗಳ ಬಗ್ಗೆ ಕೊಟ್ಟಿಲ್ಲ. ಡೀವಿಯೇಷನ್ ಮಾಡಿಲ್ಲ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಅವರ ಉತ್ತರದಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ.

"Borewells have been got drilled in the jurisdiction of this Division with the available rigs as directed by the Deputy Commissioner", this is what they have said. But deviation is permitted. Therefore I would like to ask.

ಡೀವಿಯೇಷನ್ ಪ್ರಕಾರ ತೋಡಿದಂಥ ಕೊರೆ ಬಾವಿಗಳೆಷ್ಟು? ಡಿ.ಸಿ.ಯವರು ಕಳುಹಿಸಿದ ಶಿಫಾರಸ್ಸಿನ ಮೇಲೆ ಕೊರೆದಂಥ ಬಾವಿಗಳೆಷ್ಟು?

ಶ್ರೀ ಅಬ್ದುಲ್ ನಜೀರ್‌ಸಾಬ್.—ಡೀವಿಯೇಷನ್ ಮಾಡಿ ಬೋರ್‌ವೆಲ್‌ಗಳನ್ನು ಕೊರೆದಿಲ್ಲ. ಜಿಲ್ಲಾಧಿಕಾರಿಗಳು ಕೊಟ್ಟಂಥ ಯಾದಿ ಪ್ರಕಾರ ಬಾವಿಗಳನ್ನು ಕೊರೆಯಲಾಗಿದೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಸ್ವಾಮಿ, ಮಂತ್ರಿಯವರು ಸಮರ್ಪಕವಾದ ಉತ್ತರ ಕೊಟ್ಟಿಲ್ಲ; ಪ್ರಶ್ನೆಯನ್ನು ತಡೆಹಿಡಿದು ಬೇರೆ ಉತ್ತರ ಕೊಡಿಸಿ. ಚುನಾವಣಾ ಸಮಯದಲ್ಲಿ ರಾಜಕೀಯಕ್ಕಾಗಿ ಬಳಸಿ ಕೊಂಡು ಕೊರೆಬಾವಿಗಳನ್ನು ತೆಗಿಸಿದ್ದಾರೆ.

ಶ್ರೀ ಅಬ್ದುಲ್ ನಜೀರ್‌ಸಾಬ್.—ಡೀವಿಯೇಷನ್ ಮಾಡಿಲ್ಲ. ಜಿಲ್ಲಾಧಿಕಾರಿಗಳು ಕೊಟ್ಟಂಥ ಯಾದಿಯಂತೆ ಕಾನೂನುಬದ್ಧವಾಗಿ ಮಾಡಿದ್ದೇವೆ.

ಅಧ್ಯಕ್ಷರು.—ನಾನು ಇದಕ್ಕೆ ಅವಕಾಶ ಕೊಡುವುದಿಲ್ಲ. ಈಗಾಗಲೇ ಹತ್ತು ನಿಮಿಷ ಆಗಿದೆ. ತಮಗೆ ಇನ್ನೂ ಹೆಚ್ಚಿನ ಮಾಹಿತಿ ಬೇಕಾಗಿದ್ದರೆ ಅರ್ಧ ಗಂಟೆ ಚರ್ಚೆಯಲ್ಲಿ ವಿಷಯವನ್ನು ತಂದು ಚರ್ಚೆ ಮಾಡಬಹುದು.

ಶ್ರೀ ಎಂ. ವೀರಪ್ಪ ಮೊಯ್ಲಿ.—ಸರ್ಕಾರ ನಿರಂಕುಶಾಧಿಕಾರ ರೀತಿಯಲ್ಲಿ ಉತ್ತರ ಕೊಡುತ್ತಿದೆ.

ಶ್ರೀ ಎಂ. ಅಬ್ದುಲ್ ನಜೀರ್‌ಸಾಬ್.—ಸರ್ವಾಧಿಕಾರ ಮನೋಭಾವ ನಮಗೆ ಇಲ್ಲ. ಅದು ವೀರಪ್ಪ ಮೊಯ್ಲಿಯವರಿಗೆ ಇರಬೇಕು.